ಅಮ್ಮ ಕುಳಿತು ನಿದ್ದೆ ಮಾಡುತ್ತಿದ್ದಾರೆಂದು ತೋರಿತು. ಸೂಕ್ಷ್ಮವಾಗಿ ನೋಡಿದಾಗ ಇಲ್ಲ, ಕಣ್ಣುಗಳು ರೋಗಿಯ ಮುಖಕ್ಕೂ ಮತ್ತೆ ಮಗನ ಮುಖದೆಡೆಗೂ ಸಂಚರಿಸುತ್ತಿವೆ.

ಅಲ್ಮಾರದಿಂದ ಕೆಂಪು ಔಷಧಿ ತುಂಬಿದ ಬಾಟ್ಲಿ ತೆಗೆದು ಲೋಟದ ನೀರಿಗೆ ಬಿಂದುಗಳಾಗಿ ಸುರಿದ.

ಅಪ್ಪ ಮುಖ ತಿರುಗಿಸಿ ಬಾಯಿ ತೆರೆದರು. ಔಷಧಿ ಬಾಯಿಗೆ ಎರೆದಾಗ ತುಟಿಗಳ ಅಂಚಿನಿಂದ ತುಂಬಾ ಹನಿಗಳು ಹರಿದುವು, ಬೆಳ್ಳಗಿನ ತಲೆದಿಂಬಿನ ಕವಚಗಳಲ್ಲಿ ಕಲೆಗಳಾಗಿ ಬದಲಾದುವು.

ಔಷಧಿಯ ಹಾಗೂ ಟರ್ಪಂಟೈನ್‌ನ ಅಸುಖಕರವಾದ ಗಂಧ ಕೋಣೆಯಲ್ಲಿ ತಂಗಿ ನಿಂತಿತ್ತು. ಮಗನು ಉತ್ತರ ದಿಕ್ಕಿನ ಕಿಟಕಿಯ ಸಮೀಪ ನಿಂತು ನೋಡಿದ. ಗೋಡೆಯಾಚೆಯ ನಿರ್ಜನವಾದ ದಾರಿ ತಕ್ಷಣ ಸಮತಟ್ಟನೆಡೆಗೆ ಹೊರಳುತ್ತದೆ. ಮುಚ್ಚಿದ ಹಿಮದ ಆವರಣ ಅಂತರಿಕ್ಷದ ಒಡಲಿನಿಂದ ಜಾರಿ ಬಿದ್ದಿರಲಿಲ್ಲ. ಹಾಲಿನ ಪಾತ್ರೆಯನ್ನು ನೇತಾಡಿಸಿಕೊಂಡು ತಲೆಗೆ ಮುಸುಕು ಹಾಕಿದ ಒಬ್ಬಾಕೆ ಪಠಾಣರ ಹುಡುಗಿ ಕಾಲಿನ ಗೆಜ್ಜೆಯನ್ನು ಕಿರುಗುಟ್ಟಿಸಿಕೊಂಡು ನಡೆದು ಹೋದಳು.

ದೂರದಲ್ಲಿ ಬೆಟ್ಟದ ಮೇಲೆ ನಗರದ ಕಲ್ಲಿನ ಕಟ್ಟಡಗಳು ತಿಳಿಗೊಳ್ಳುತ್ತ ಬರುತ್ತಿವೆ.

ಪರಿಚಾರಕನ ಶಬ್ದ ಕೇಳಿಸಿತು. 'ಕಾಫಿ!'

ಅವನ ಕೆಂಪು ಚೌಕುಳಿ ಲುಂಗಿ ಒಮ್ಮೆಯೂ ಹಳತಾಗುವುದಿಲ್ಲವೇ? ಮೊದಲಿಗೆ ಕಾಣುವಾಗಲೇ ಹೀಗೆ ಇತ್ತು.

ಆವಿಯಾಡುವ ಕಾಫಿ ಒಂದೊಂದು ಗುಟುಕಾಗಿ ಸೇದಿ ಕುಡಿದಾಗ ನರಗಳು ಎಚ್ಚೆತ್ತುಕೊಂಡುವು. ಒಳಗೆ ಬೆಚ್ಚಗಿನ ತರಂಗವೊಂದು ಮೇಲೆದ್ದು ಹಾರುವಂತೆ ತೋರಿತು.

ನಗರದಿಂದ ದೂರವಾದುದರಿಂದ, ಈ ಪ್ರದೇಶ ಪೂರ್ಣ ನಿಶ್ಶಬ್ದವಾಗಿದೆ. ದೂರ ದಾರಿಯಾಚೆಗಿನ ಜವುಗು ನೆಲದ ಆಚೆಕೆರೆಯಲ್ಲಿ ತುಂಬಾ ಗುಡಿಸಲುಗಳಲ್ಲಿ ಮನುಷ್ಯರು ವಾಸ ಮಾಡುತ್ತಿದ್ದಾರೆ. ಕೂಲಿ ಕೆಲಸಗಾರರಾದ ಪಠಾಣರು.

ನಿರ್ಜನವಾದ ನಡುವೆ, ಏಕಾಂತದಾಚೆಗಿನ ವಿಶಾಲ ಪ್ರದೇಶದಲ್ಲಿ ಒಂದು ದೊಡ್ಡಮನೆ. ಕೈ ತಪ್ಪಿನಿಂದಾದ ಅಸಂಬದ್ಧ ರಚನೆಯಂತೆ ನಿಂತಿದೆ.ಮಗ ಮತ್ತೆ ನೆನಪು ಮಾಡಿಕೊಂಡ. ಅದರೊಳಗೆ ಒಬ್ಬ ತಂದೆ, ತಾಯಿ ಮತ್ತು ಮಗ ನೆಲೆಸಿದ್ದಾರೆ.

ಅಲ್ಲಿಗೊಬ್ಬ ಸಂದರ್ಶಕ ಸಮೀಪದಲ್ಲಿಯೇ ಬರಲಿದ್ದಾನೆ. ದ್ವೇಷದಿಂದ ಅಕಾರಣವಾಗಿ ಒಳ ಕುದಿತದೊಡನೆ, ಮಗ ನೆನಪಿಸಿಕೊಂಡ. ಸಾವು ಇಲ್ಲಿ ಒಂದು ಘಟನೆಯಾಗುವುದಿಲ್ಲ.

ಡಾಕ್ಟರು ಬಂದರು. ಕಂಪನಿಯಿಂದ ದೊಡ್ಡ ಕೆಲವು ಜನ ಉದ್ಯೋಗಿಗಳು ಬಂದರು.

ಅಪ್ಪ ಹೇಗಿದ್ದಾರೆ?

ಹೆಚ್ಚಾಗಲಿಲ್ಲ. ಕಡಿಮೆಯೂ ಇಲ್ಲ.

ರೋಗ ಶಯ್ಯೆಯಲ್ಲಿ ಶಬ್ದಗಳು ನರಳಾಟಗಳಾಗುತ್ತಲೂ ಸಾಲಿನ ಹೆಜ್ಜೆ ಸಪ್ಪಳಗಳು ಸಮೀಪಿಸುತ್ತಿರುವ ದಿನಗಳಲ್ಲಿ ಸಂದರ್ಶಕರ ಸಂಖ್ಯೆಯೂ ಹೆಚ್ಚುತ್ತಲೇ ಹೋಯಿತು. ಆದರೂ ಮನೆ ಮೌನವಾಗಿತ್ತು. ದುಃಖ ತುಂಬಿದ ಶಬ್ದಗಳೋ, ಅವಸರದ ಕೆಲಸಗಳೋ, ಇವ್ಯಾವೂ ಇರಲಿಲ್ಲ.

ಮಗ ಕಿಟಕಿಯ ಸಮೀಪ ಹೋಗಿ ನಿಲ್ಲಲು, ತಣ್ಣಗಿನ ಪ್ರಭಾತ ಗಾಳಿಯು ನಿಶ್ಶಬ್ದವನ್ನು ಕುಲುಕಿ ಅಲುಗಾಡಿಸಿಕೊಂಡು ಒಂದು ಕೊರಳ ಗಂಟೆಯ ನಾದ ಕೇಳಿಸಿತು. ತಲೆ ಹೊರಹಾಕಿ ದಾರಿಯತ್ತ ನೋಡಿದ. ಕಣಿವೆ ದಾರಿಯಿಂದ ಎತ್ತರಕ್ಕೇರುತ್ತ ಅದು ಹತ್ತಿರಕ್ಕೆ ಬಂತು.

ಕಪ್ಪು ಬಣ್ಣದ ಅರಬಿ ಕುದುರೆಯ ಮುಖ ಮೊದಲು ಕಾಣಿಸಿತು. ಕುದುರೆ ಮೂಗಿನಿಂದ ಬಿಟ್ಟಗಾಳಿಗೆ ಹಿಮ ಕವಿದ ಪ್ರಭಾತದಲ್ಲಿ ಹೊಗೆ ಹಾರುವುದನ್ನು ಕಾಣಬಹುದಿತ್ತು. ನಾಲ್ಕು ದಿಕ್ಕುಗಳನ್ನೂ ಮರೆಮಾಡಿದ ಆ ಗಾಡಿ ಸ್ವಲ್ಪ ಆಚೆಕಡೆಯಿಂದ ಬರುತ್ತದೆ. ಕೊರಳ ಗಂಟೆಗಳು ಒಮ್ಮೆ ಕುಲುಕಿ ಸದ್ದಡಗಿತು. ಮುಂಭಾಗದಲ್ಲಿಯೇನು ಗಾಡಿ ನಿಂತುದು? ತೋಟಮಾಲಿ ಕಬ್ಬಿಣದ ಬಾಗಿಲುಗಳೆಡೆಗೆ ಓಡುವುದು ಕಾಣಿಸಿತು. ಸಿಮೆಂಟು ನೆಲದಲ್ಲಿ ಕಬ್ಬಿಣದ ಗಾಲಿಗಳು ಉರುಳುವ ಶಬ್ದ ಕೇಳಿಸಿತು. ಕಗ್ಗಿನ ಕುಳ್ಳಗಿನ ಕುದುರೆ ಆಯಾಸದಿಂದ ಹೊಗೆಯುಗುಳುತ್ತ ತಲೆ ತಗ್ಗಿಸಿ ನಿಂತಿರುವುದನ್ನು ಅಲ್ಲಿಂದಲೇ ಕಾಣಬಹುದಿತ್ತು. ಗಾಡಿಯವ ಚಾಟಿಯನ್ನು ಮೇಲೆ ಸುತ್ತಿಟ್ಟು ಕೆಳಗಿಳಿದ. ನರೆತ ಗಡ್ಡದ ಎತ್ತರದ ಕಗ್ಗಿನ ಒಬ್ಬ ಮುದುಕ. ಆತ